ಸದರೀ ಧರಖಾಸ್ತು ದಾರರಾದ ಗೋಪಾಲಕೃಷ್ಣ ಸ್ವಾಮಿ ಮೈನರ್ ಗಾರ್ಡಿಯನ್ ಮತ್ತು ತಾಯಮ್ಮ ಗಾರವರ್ಮನ ಅರ್ಜಿಯನ್ನು 1884ನೇ ವಿ ಫಿಬ್ರವರೀ ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಮಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶಿಗಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಮ್ಮಯ್ಯ ಜೋಯಿಸನ ಆಸ್ತಿಗೆ ಹಕ್ಕು ದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಪರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1884ನೇ ಇಸವಿ ಜನವರೀ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿನವ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ತಾರೀಖು 9ನೇ ಜನವರೀ 1884.

ಇದರಿಂದ ಪ್ರಕಟಿಸುವದೇನಂದರೆ, 1884ನೇ ಇಸವಿಯಲ್ಲಿ ಮೈಸೂರು ಡಿಸ್ಟ್ರಿಕ್ಟ್‌ನಿಂದ ವಿಚಾರಣೆ ಬಗ್ಯೆ ಕಮ್ಮಿಟ್ ಮಾಡಲ್ಪಡುವ ಕಜ್ಜಿಮೆಗಳ ಸೆಷ್ಷನು ದರ್ಯಾಫ್ತಿಯು, ಮೈಸೂರು ಮೊಕ್ಕಾಂನಲ್ಲಿ ಇದರಡೀ ಕಂಡ ತಾರೀಖುಗಳಲ್ಲಿ ನಡಿಸಲ್ಪಡುವದು.

15ನೇ ಜನವರೀ	1884	ಮಂಗಳವಾರ
11ನೇ ಫಿಬ್ರವರೀ	,,	ಸೋಮವಾರ
11ನೇ ಮಾರ್ಚೀ	,,	ಮಂಗಳವಾರ
1ನೇ ಏಪ್ರಿಲ್	,,	ಗುರುವಾರ
9ನೇ ಜೂನ್	,,	ಸೋಮವಾರ
14ನೇ ಜುಲೈ	,,	ಡಿಟೋ
11ನೇ ಆಗಸ್ಟು	,,	ಡಿಟೋ
8ನೇ ಸೆಪ್ಟಂಬರ್	,,	ಡಿಟೋ
13ನೇ ಅಕ್ಟೋಬರ್	,,	ಡಿಟೋ
10ನೇ ನವಂಬರ್	,,	ಡಿಟೋ
8ನೇ ಡಿಸಂಬರ್	,,	ಡಿಟೋ

ದರ್ಯಾಫ್ತಿ ಬಗ್ಯೆ ಕಮ್ಮಿಟ್ ಮಾಡುವ ಅಧಿಕಾರವುಳ್ಳ ತಮಾಂ ಮಾಜೀಸ್ಟ್ರೇಟರುಗಳೂ, ಅವರಿಂದ ಕಮ್ಮಿಟ್ ಮಾಡಲ್ಪಡುವ ಕಜ್ಜಿಮೆಗಳಲ್ಲಿ ಫಿರ್ಯಾದಿ ವ ಸಾಕ್ಷಿಗಾರರ ಹಾಜರಾತಿ ಬಗ್ಯೆ ಸದರೀ ತಾರೀಖುಗಳಲ್ಲಿ ತಕ್ಕ ಏರ್ಪಾಡು ಮಾಡತಕ್ಕದ್ದೆಂದು ಕೇಳಿ ಕೊಳ್ಳಲ್ಪಡುತ್ತಾರೆ.

ವಿ. ಎ. ನರಸಿಂಹಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 4ನೇ ಜನವರೀ 1884.

ಇದರಿಂದ ತಿಳಿಸುವದೇನಂದರೆ, ಶಿವಮೊಗ್ಗ ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸ್ಯ 1884ನೇ ಇಸವಿ ಏಪ್ರಿಲ್ ಗುರ್ಯೇ ತಾರೀಖು ಮೊದಲು 1885ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಜಕ್ಕಾದ ಆಹಾರ ಪೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಿಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮೊಡಲ್ಪಟ್ಟ ದರಖಾಸ್ತುಗಳನ್ನು ಶಿವಮೊಗ್ಗ ಜೈಲ್ ಸೂಪರ್‌ಟೆಂಡೆಂಟರವರು, ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್ಲವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿ ಸ್ಯ 1884ನೇ ಇಸವಿ ಮಾರ್ಚೀ 1ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳು'' ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ''ಶಿವಮೊಗ್ಗ ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು'' ಯಂಬದಾಗಿ ವಿಳಾಸ ಬರೆಯಲ್ಪಡ ತಕ್ಕದ್ದು,

4. 500 ರೂಪಾಯಿಗಳು ನಗದಾಗಿ ಅಥವಾ ಕರ್ಣಿಸೀ ನೋಟುಗಳ ಮೂಲಕ ಡಿಪಾಜಿಟ್‌ನೀಲೆ ಕಳುಹಿಸಲ್ಪಟ್ಟ ಹೊರ್ತು ಯಾ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಶಿವಮೊಗ್ಗ ಡಿಸ್ಟ್ರಿಕ್ಟು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಯವುಳ್ಳ ದರಖಾಸ್ತುದಾರರ ರೂಬರೂ ಕೂಡ್ಕಂಡ ತಾರೀಖಿನೊಳಗೆ ಶಿವಮೊಗ್ಗ ಡಿಸ್ಟ್ರಿಕ್ಟು ಜೈಲ್ ಸೂಪರ್‌ಟೆಂಡೆಂಟರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರ ನಮೂದಿಸಲ್ಪಡತಕ್ಕದ್ದು.

				ರೂ. ಆ. ಪೈ.
ನೇಟಿವ್ ಕೂಲಿಯವರುದ ಗಂಡಸರು	A ಕ್ಲಾಸ್	..	..	
ಡಿಟೋ	ಡಿಟೋ B ,,	..	..	
ಡಿಟೋ	ಡಿಟೋ C ,,	..	..	
ಡಿಟೋ	ಹುಡುಗರಾದ ಖೈದಿ ರು	..	..	
ಡಿಟೋ ಕೂಲೀ ಮಾಡದ ಗಂಡಸರು, ಹೆಂಗಸರು, ವಿಚಾರಣೆಯಲ್ಲಿ ಇರತಕ್ಕವರು		D ಕ್ಲಾಸ್		
ಯೂರೋಪಿಯರ್ಯಗಳು ವ ಈಸ್ಟ್ ಇಂಡಿಯರ್ಯಗಳು		..	..	

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ ಆಸಪತ್ರಿ ಪಥ್ಯಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಂತ್ರೆ, ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವಣ, ಸ್ನಾನ ಮಾಡಲಿಕ್ಕೆ ಶೀಗೇಕಾಯಿ, ತಮಾಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಗೂಡೆ ಚಾಪೆ ಮಾಡಲಿಕ್ಕೆ ಬಿದುರು, ಮಡಿಕ್ಕೆ ಸುಡುವದಕ್ಕೆ ಸಾದೆ, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ, ಸಕ್ಕರೆ ವಗೈರೇ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಚಕವಳುಮಂಣ್ಣು, ಮತ್ತು ಖೈದಿಗಳಿಗೆ ಕ್ರಮವಾಗಿ ಸರಬರಾಯಿ ಮಾಡಲ್ಪಡುವ ಬಟ್ಟೆ ಶಿವಾಯಿ, ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರ್ಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ, ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವೆ.

9. ಮುಂಜೂರಾದ ದರಖಾಸ್ತುದಾರನ, ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಲಿಕ್ಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ಮೆಂಟ್ ಪತ್ರಗಳ ಮೂಲಕವಾದರೂ 1,000 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಬಂದು ವಾರದ ಒಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರಿ ಡಿಪಾಜಿಟ್ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಶಿವಮೊಗ್ಗ ಜೈಲ್ ಸೂಪರ್ಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಬಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ, ಇಟ್ಟುಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳ್ಗ್ಯೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಪಿಕ್ಕಿಗೆ ಕೊಡಲ್ಪಡಬಹುದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಶಿವಮೊಗ್ಗ ಜೈಲ್ ಸೂಪರ್ಟೆಂಡೆಂಟರವರ ಯಾಖ್ತ್ಯಾರಿಯಿಂದ 50 ರೂಪಾಯಿಗೆ ಮಿರದ ಬಂದು ಜುರ್ಮಾನೆಯು ಹಾಕಲ್ಪಡುವದು, ಖೂರ್ ಬೂರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾರ್ಮೀ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಶಿವಮೊಗ್ಗ ಜೈಲ್ ಸೂಪರ್ಟೆಂಟೆಂಟರವರ ನಿರ್ಣಯವೇ ಆಖೈರಾಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಖೈದಿಗಳ ವುಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

16. ಇನ್ಯಾವ ಸಂಗತಿಯನ್ನಾದರೂ ತಿಳಿಯಬೇಕಾದರೆ ಜೈಲ್ ಸೂಪರ್ಟಿರಡೆಂಟರವರನ್ನು ಕೇಳಿ ತಿಳದುಕೊಳ್ಳಬಹುದು.

17. ಅಡಿಗೆ ಮಾಡುವಲ್ಲಿ ಮಡಿಕೆಗಳು ವಡದು ಹೋಗುವದರಿಂದ ಆಹಾರವೇನಾದರೂ ಅಕಸ್ಮಾತ್ ನಷ್ಟವಾದರೆ ಅದರ ಲು ನನ್ನು ಕಂಟ್ರಾಕ್ಟುದಾರನೇ ಕಟ್ಟಿಕೊಡತಕ್ಕದ್ದು.

18. ಹಾಲೀ ಶಿವಮೊಗ್ಗ ಜೈಲ್‌ನಲ್ಲಿ 250 ಮಂದಿ ಖೈದೀರಿದ್ದಾರೆ, ಈ ಸಾಲ್‌ನಲ್ಲಿ ಹುಮಾರ್ 300ರ ವರಿಗೆ ಜಾಸ್ತಿಯ ಹುದಾಗಿ ಅಂದಾಜ್ ಇರುತ್ತೆ.

19. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮುಕ್ತುಮಿನ ಮೈಸೂರು ಗೆಜಿಟ್ಟಿನಿಂದಾಗಲಿ, ಶಿವಮೊ ಜೈಲ್ ಸೂಪರ್ಟೆಂಡೆಂಟರವರನ್ನ ಕೇಳಿ ಆಗಲಿ ತಿಳದುಕೊಳ್ಳಬಹುದು.

ಟಿ. ಪಂಚನಾಥರಾವ್,
ಜೈಲ್ ಸೂಪರ್ಟೆಂ